ರೂಪದಲ್ಲಿರುವ ಕರ್ನಾಟಕ ವಿಧಾನಪರಿಷತ್ತಿನ ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ತಿದ್ದುಪಡಿ ವಿಧೇಯಕ-2002 ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ನಡವಳಿಕೆ ನಿಯಮ-111 (1) ಅವರ ಮೇರೆಗೆ ಕರ್ನಾಟಕ ವಿಧಾನಪರಿಷತ್ತು ದಿನಾಂಕ: 8ನೇ ಆಗಸ್ಟ್ 2002ರಂದು ಯಾವುದೇ ತಿದ್ದುಪಡಿಗಳಿಲ್ಲದೆ. ಅಂಗೀಕರಿಸಿದೆ ಎಂದು ತಿಳಿಸಿರುತ್ತಾರೆ.

13. ಶಾಸನ ರಚನೆ

(ಅ) ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ವಿದೇಯಕ, 2002, ಪರ್ಯಾಲೋಚನಾ ಪ್ರಸ್ತಾವ.

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು) ಮಾನ್ಯ ಅಧ್ಯಕ್ಷರೇ, "2002ರ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯ ಸಂಸ್ಥೆಗಳ (ತಿದ್ದುಪಡಿ) ವಿದೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ".

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು

ಸನ್ಮಾನ್ಯ ಉಪಾಧ್ಯಕ್ಷರು (ಶ್ರೀ ಮನೋಹರ್ ಹೆಚ್. ತಹಸೀಲ್ದಾರ್) ಅಧ್ಯಕ್ಷರು ಪೀಠವನ್ನಲಂಕರಿಸಿದ್ದರು.

+ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು):- ಮಾನ್ಯ ಅಧ್ಯಕ್ಷರೇ, ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯ ಸಂಸ್ಥೆಗಳ ವಿದೇಯಕ ಏನಿದೆ ಈ ಆಕ್ಟ್‌ನ ಸೆಕ್ಷನ್ 25ರ ಪ್ರಕಾರ ವುಮನ್‌ಗೆ ಶಿಫ್ಟ್‌ನಲ್ಲಿ ಕೆಲಸ ಮಾಡುವುದಕ್ಕೆ ಪ್ರಾವಿಜನ್ ಇಲ್ಲ, ನಮ್ಮ ಕರ್ನಾಟಕದ ಬೆಂಗಳೂರು ಸಿಟಿಯಲ್ಲಿ 1500 ಐ.ಟಿ. ಎಸ್ಟಾಬ್ಲಿಷ್‌ಮೆಂಟ್ಸ್ ಇವೆ. about 30000 workers are working in these establishments. Out of that 22,000 are men and 8000 are women. Here I am bringing a small amendment, just to exempt the women folk to work in the night shift system. In America and Japan, there are Call Centres where many Kannadigas are working in medical transcription and other works. Here it is night time and there it is day time. They may not be able to work during night shifts if we don't give exemptions. So, this is a small amendment in the larger interest of employment. Now in the coming three years the NASSCOM has said that about 1.6 million workers are needed in this area of employment. Here as per the Software Companies Association and others, they say that they may require at least 30,000 people in Bangalore in the coming years. This is a small amendment just to provide job facilities to women to work in the night shifts. But one condition is there; through the amendment, we are providing a condition that the women employees should be provided with trasportation facility, security facility and they should take them in batchwise. In this background this amendment is brought in and supposing we don't bring this amendment, there will be a

set back those graduates who are getting education in Information Technology and Enabling Services establishments, ಅದರ ಸಲುವಾಗಿ ನಾನು ಈ ಸಭೆಯಲ್ಲಿ ತಮ್ಮ ಮುಖಾಂತರ ವಿನಂತಿ ಮಾಡುತ್ತೇನೆ ಈ ಸಣ್ಣ ತಿದ್ದುಪಡಿ ಏನಿದೆ ಅದನ್ನು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು): ಸನ್ಮಾನ್ಯ ಉಪಾಧ್ಯಕ್ಷರೆ, ಪರ್ಟಿಕ್ಯೂಲರ್ಲಿ ವಿಶೇಷವಾಗಿ ಈ ಸಾಫ್ಟ್‌ವೇರ್ ಉದ್ಯಮದಲ್ಲಿ ಮಾಹಿತಿ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿರುವಂಥದ್ದರ ಬಗ್ಗೆ ಇದನ್ನು ತರಲಾಗಿದೆ. ಆರದೆ ಅದಕ್ಕಷ್ಟೆ ಏಕೆ? ಅದಕ್ಕೆ ಸಂಬಂಧಿಸಿರುವ ಅಗತ್ಯವಿರುವಂಥಾದ್ದು ಯಾವ್ಯಾವುದು ಇದೆ, ಅಂಥದಕ್ಕೆ ತರಬೇಕು ಮತ್ತು ಈ ರೀತಿ ಮಾಡಿದರೆ ಮತ್ತೊಂದು ಹಂತದಲ್ಲಿ ಮಹಿಳೆಯರಿಗೆ ಯಾವುದಾದರೂ ಒಂದು ರೀತಿಯ ಶೋಷಣೆ ಆಗುವ ಸಾಧ್ಯತೆಯಿದೆ. ಇದು ಬರೀ ಸಾಫ್ಟ್‌ವೇರ್ ಉದ್ಯಮಕ್ಕೆ ಮಾತ್ರ ಅಪ್ಲಿಕಬಲ್ ಆಗುತ್ತದೆ. ಇತರ ಕೆಲವು ಯಾವ್ಯಾವುದು ಇದೆ, ಅದನ್ನೂ ಮಾಡಬಹುದು ಹಾಗೂ ಮಾಡುವುದರಿಂದ ಏನೇನು ಪರಿಣಾಮಗಳುಂಟಾಗಬಹುದು ಎಂಬುದನ್ನೂ ಸಹ ನೀವು ನೋಡಬೇಕು. ಒಂದು ಕಡೆ ಪ್ರಾಹಿಬಿಷನ್ ಮಾಡಿದ್ದೀರಿ. ಒಂದಕ್ಕೆ ಎಕ್ಸೆಂಪ್ಷನ್ ಕೊಡಲು ಹೊರಟಿದ್ದೀರಿ. ಆದರಿಂದ ಏನು ಪರಿಣಾಮಗಳಾಬಹುದು ಎಂಬ ಸಂಶಯ ಸಹ ಸ್ವಲ್ಪ ಉಳಿಯುತ್ತದೆ. ಅನಂತರ, ನೀವು ತಂದಿರುವ ಆಕ್ಟ್‌ನಲ್ಲಿ ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ ಎಂದು ಏನು ತಿಳಿಸಿದ್ದೀರಿ, ಆ ಕುರಿತಂತೆ ಕನ್ನಡಕ್ಕೆ ಏನು ಭಾಷಾಂತರಿಸಿದ್ದೀರಿ, ಬಹುಶಃ ಅದು ಬೇರೆ ಅರ್ಥಕ್ಕೆ ಎಡೆಮಾಡಿಕೊಡುವಂತಿದೆ. "ಒಂದು ದೇಶವು ವಿಶ್ವದ ಯಾವ ಭಾಗದಲ್ಲಿದೆ ಎಂಬುದನ್ನು ಅವಲಂಬಿಸಿ ಆ ಸಿಬ್ಬಂದಿಯವರು ತಮ್ಮ ಗ್ರಾಹಕರೊಂದಿಗೆ ಸಾಯಂಕಾಲ ಬಹಳ ಹೊತ್ತಿನವರೆಗೂ ಅಥವಾ ಇಡೀ ರಾತ್ರಿ ಪರಸ್ಪರ ವ್ಯವಹರಿಸಬೇಕಾಗುತ್ತದೆ" ಅನ್ನುವಂತಾದ್ದು ಏನಿದೆ, ಇದು ಸ್ವಲ್ಪ ಅಪಾರ್ಥಕ್ಕೆಡೆಯುಂಟು ಮಾಡುತ್ತದೆ. ಇಂಗ್ಲೀಷ್‌ನಲ್ಲಿ ಏನು ನೀವು ಬಿಲ್ ಮಾಡಿದ್ದೀರಿ, ಅದನ್ನೇ ನೀವು ನೇರವಾಗಿ ಕನ್ನಡಕ್ಕೆ ಭಾಷಾಂತರಿಸಿದರೆ ಬಹಳ ಅಪಾರ್ಥ ಉಂಟಾಗುತ್ತದೆ. ಅದಕ್ಕೋಸ್ಕರ ಯಾವ ಅಧಿಕಾರಿಗಳು ಇದನ್ನು ಈ ರೀತಿ ಭಾಷಾಂತರಿಸಿದ್ದಾರೆ, ಅವರು ಅಪಾರ್ಥಕ್ಕೆಡೆಯಿಲ್ಲದಂತೆ ಸರಿಯಾಗಿ ಭಾಷಾಂತರಿಸಿಬೇಕಾಗುತ್ತದೆ. ಯಾವುದೋ ಒಂದು ಸಂಸ್ಥೆಗೆ ಸಂಬಂಧಿಸಿದ ಬಿಸಿನೆಸ್ ಅನ್ನಬಹುದು. ಅದು ಬಿಟ್ಟು ಗ್ರಾಹಕರು ಇಡೀ ರಾತ್ರಿ ಪರಸ್ಪರ ವ್ಯವಹರಿಸಬೇಕಾಗುತ್ತದೆ ಎನ್ನುವ ವಾಕ್ಯ ಬಹಳ ಅಪಾರ್ಥವುಂಟು ಮಾಡುತ್ತದೆ. ದಯವಿಟ್ಟು ಆ ವಾಕ್ಯವನ್ನು ವಿತ್‌ಡ್ರಾ ಮಾಡಿಕೊಳ್ಳಿ. ತನ್ಮೂಲಕ ಸರಿಯಾದ ಸುಸಂಸ್ಕೃತವಾದ ಹಾಗೂ ನಿಜವಾಗಿಯೂ ಆ ಕಂಪಿನಿಯ ಬಿಸಿನೆಸ್‌ಗೆ ಸಂಬಂಧಿಸಿರುವಂತಾದ್ದನ್ನು ಸ್ಪೆಸಿಫಿಕ್ಕಾಗಿ ಕಾಣಿಸುವಂತಾದ್ದು ಆಗಬೇಕು. ಇಲ್ಲದಿದ್ದರೆ, ಇದು ಅಪಾರ್ಥವುಂಟು ಮಾಡುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ) : ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ತಲೆ ಖರ್ಚು ಮಾಡದೆ ಕಾನೂನುಗಳ ಕತ್ತೆಯನ್ನು ನಮ್ಮ ಮೇಲೆಲ್ಲಾ ಒದೆಸುತ್ತದೆನ್ನುವುದಕ್ಕೆ ಇದೊಂದು ಬಹಳ ದೊಡ್ಡ ಉದಾಹರಣೆ. ಈ ಸರ್ಕಾರಕ್ಕೆ ಆದೇನು ಕಾಯಿಲೆ ಬಂದಿದೆ ಎಂಬುದೂ ನನಗಂತೂ ಅರ್ಥವಾಗುತ್ತಿಲ್ಲ. ಮಂತ್ರಿಗಳು ಇದನ್ನು ವಿಚಾರ ಮಾಡಿದರೋ? ಇಲ್ಲವೋ? ಇದರ ಅವಶ್ಯಕತೆ ಏನೆಂಬುದೇ ನನಗೆ ಗೋತ್ತಾಗುತ್ತಿಲ್ಲ. ಇದನ್ನು ಎಕ್ಸೆಂಪ್ಷನ್ ಮಾಡಬೇಕೆಂದು ಕೋರಿ ಎಷ್ಟು ಐಟಿ ಕಂಪನಿಗಳವರು ಬಂದು ನಿಮಗೆ ಅಪ್ಲಿಕೇಶನ್‌ಗಳನ್ನು ಕೊಟ್ಟಿದ್ದಾರೆ? ಎಷ್ಟು ಜನರ ಮೇಲೆ

ನಿಮಗೆ ನಿಯಂತ್ರಣವಿದೆ? ಎಲ್ಲಿದೆ ಲೇಬರ್ ಡಿಪಾರ್ಟ್‌ಮೆಂಟ್? ಒಂದೊಂದು ತಾಲ್ಲೂಕಿಗೆ ಒಬ್ಬೊಬ್ಬರಂತೆ ಲೇಬರ್ ಇನ್ಸ್‌ಪೆಕ್ಟರ್ ಇದ್ದಾರೆ. ಮಾನ್ಯ ಉಪಾಧ್ಯಕ್ಷರೆ, ತಮ್ಮ ಕ್ಷೇತ್ರವಾದ ಹಾನಗಲ್‌ಗೆ ಎಷ್ಟು ಜನ ಬಂದು ಏನು ಮಾಡಿದ್ದಾರೆಂಬುದನ್ನು ಸ್ವಲ್ಪ ನನಗೆ ದಯವಿಟ್ಟು ತಿಳಿಸುತ್ತೀರಾ? ಮಾನ್ಯ ಮಂತ್ರಿಗಳಾದ ಖಿಮರುಳ್ ಇಸ್ಲಾಂರವರೆ, what is the necessity of such a legislation? I am not understnding this. ಇದೇನೆಂದರೆ, ಲೇಬರ್ ಇನ್ಸ್‌ಪೆಕ್ಟರ್ ಅಲ್ಲಿಗೆ ಹೋಗಿ ಇನ್ನಷ್ಟು ವಸೂಲಿ ಮಾಡಿಕೊಳ್ಳುವುದಕ್ಕೆ ತರುತ್ತಿರುವಂಥ ಒಂದು ಕಾನೂನಾಗಿದೆ. ಆತನಿಗೆ ಇನ್ನೊಂದು ಕಾನೂನು. This is another teeth, not to the Government, to that man who wants to bite and make some money. ತೊಂದರೆಯಾಗಿರುವುದೇನೆಂದು ನನಗಂತೂ ಅರ್ಥವಾಗಿಲ್ಲ. ನಿಮ್ಮನ್ನು ಕೇಳಿಯೇ ಎಲ್ಲವನ್ನೂ ಮಾಡುತ್ತಾರಾ? ಬಾರ್ ಅಂಡ್ ರೆಸ್ಟೋರೆಂಟ್‌ಗಳನ್ನು ಇಷ್ಟೊತ್ತಿಗೆ ಕ್ಲೋಸ್ ಮಾಡಬೇಕೆಂಬ ಬಗ್ಗೆ ಈಗಾಗಲೇ ಕಾನೂನು ಇದೆ. ಬಿಎಂಟಿಎಸ್ ಅವರಿಗೆ ಹೇಳುವ ಮೂಲಕ ನಾಲ್ಕು ಗಂಟೆಗೆ ಓಡಿಸುವ ಬಸ್ಸನ್ನು ಮೂರು ಗಂಟೆಗೆ ಓಡಿಸಬೇಕೆಂದು ಹೇಳಿದರೆ ಆಯಿತು. ಇದಕ್ಕೆ ಕಾನೂನಿನ ಅವಶ್ಯಕತೆ ಏನಿದೆಯೆಂಬುದು ನನಗಂತೂ ಅರ್ಥವಾಗುತ್ತಿಲ್ಲ. ಇದೊಂದು ಅನಾವಶ್ಯಕವಾಗಿರತಕ್ಕಂಥ, ಸಮಯವನ್ನು ವ್ಯಯ ಮಾಡತಕ್ಕಂಥ ಮತ್ತು ಸಣ್ಣಪುಟ್ಟ, ತಲೆಗೆ ಬಟ್ಟೆ ಇಲ್ಲದವರು ಫ್ಯಾಕ್ಟರಿ ಮಾಡಲು ಹೋಗಿರುತ್ತಾರಲ್ಲಾ, ಅವರಿಗೆ ಇದೊಂದು ಬಹಳ ದೊಡ್ಡ ಅಬ್‌ಸ್ಟ್ರಕ್ಷನ್ ಎನ್ನುವಂತಾದ್ದು ನನ್ನ ಅಭಿಪ್ರಾಯ. I suggest the Hon'ble Minister to with draw this.

ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ): ಮಾನ್ಯ ಉಪಾಧ್ಯಕ್ಷರೆ, ಈ ಕುರಿತಾದ ವಿಧೇಯಕವನ್ನು ಮಾನ್ಯ ಸಚಿವರು ಮಂಡಿಸಿದ್ದಾರೆ. ಆದರೆ, ರಾತ್ರಿ ವೇಳೆಯಲ್ಲಿ ಅವರಿಗೆ ಪರಸ್ಪರ ಏನೋ ವ್ಯವಹಾರ ಇರುತ್ತದೆಂದು ಬಿಲ್‌ನಲ್ಲಿ ಹೇಳಿದ್ದಾರೆ. ಯಾವುದರ ಬಗ್ಗೆ ಪರಸ್ಪರ ವ್ಯವಹರಿಸಬೇಕಾಗುತ್ತದೆ ಎಂಬುದರ ಬಗ್ಗೆ ಸ್ಪಷ್ಟವಾಗಿ ಹೇಳಿಲ್ಲ. ಆದರೆ, ರಾತ್ರಿ ವೇಳೆಯಲ್ಲಿ ಪರಸ್ಪರ ವ್ಯವಹರಿಸಬೇಕಾಗುತ್ತದೆಂದು ಹೇಳಿದ್ದಾರೆ. ಬೆಳಿಗ್ಗೆ ಲೇಬರ್ ಇನ್ಸ್‌ಪೆಕ್ಟರ್‌ಗಳು ಹೋದ ತಕ್ಷಣ ಇದನ್ನು ಹೀಗೆ ಮಾಡಬೇಕೆಂದು ಹೇಳಿದಾಗ, ಫ್ಯಾಕ್ಟರಿಯವರು ಕೊಡುತ್ತಿರುವುದನ್ನು ಇನ್ನಷ್ಟು ಹೆಚ್ಚು ಮಾಡಿಕೊಳ್ಳುವುದಕ್ಕೆ, ಅವರು ವಸೂಲಿಯನ್ನು ಜಾಸ್ತಿ ಮಾಡಿಕೊಳ್ಳುವುದಕ್ಕೋಸ್ಕರ ಇದನ್ನು ಮಾಡಿದ್ದಾರೆ. ಆದುದರಿಂದ, ಮಾನ್ಯ ಸಚಿವರು ಈ ವಿಧೇಯಕವನ್ನು ತರುವುದು ಅಷ್ಟು ಚೆನ್ನಾಗಿರುವುದಿಲ್ಲ.

ಶ್ರೀ ಎ.ಸೋಮಣ್ಣ (ಬಿನ್ನಿಪೇಟೆ): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ವಿಧೇಯಕವನ್ನು ಏನು ತಂದಿದ್ದಾರೆ, ನಾನು ತಮ್ಮ ಮುಖಾಂತರ ಸನ್ಮಾನ್ಯ ಸಚಿವರಿಗೆ ತಿಳಿಸಬಯಸುವುದಿಷ್ಟೆ. ಇವೊತ್ತು ಬೆಂಗಳೂರಿನಂತಹ ದೊಡ್ಡ ನಗರದಲ್ಲಿ ಕೆಲವು ಐಟಿ ಸಾಫ್ಟ್‌ವೇರ್‌ನವರು ರಾತ್ರಿ ವೇಳೆಯಲ್ಲಿ ಅವರಿಗೆ ಇಂಟರ್‌ನ್ಯಾಷನಲ್ ಕಾಲ್ ಮತ್ತೊಂದು ಬರುವಂತಾದ್ದಕ್ಕೆ ಕೆಲವರನ್ನು ನೇಮಿಸಿಕೊಳ್ಳುವ ಮಾಡಿಕೆ ಇದೆ. ನಾನು ವಿಜಯನಗರದಲ್ಲಿ ವಾಸಿಸುತ್ತಿದ್ದು. ನನ್ನ ಮನೆಯ ಪಕ್ಕದಲ್ಲಿಯೇ ನನ್ನ ಸ್ನೇಹಿತರ ಮಕ್ಕಳು ಅಲ್ಲಿಗೆ ಹೋಗುತ್ತಾರೆ. ಆ ಸಾಫ್ಟ್‌ವೇರ್ ಕಾರ್ಖಾನೆಯಲ್ಲಿ ಸುಮಾರು 80-85 ಜನರು ಕೆಲಸ ಮಾಡುವಾಗ 10-15 ಹೆಣ್ಣುಮಕ್ಕಳಿರುತ್ತಾರೆ. ಯಾರು ಮಾಲೀಕ ಇರುತ್ತಾರೆ, ಸಂಬಂಧಪಟ್ಟ ಮೇಲಧಿಕಾರಿ ಇರುತ್ತಾರೆ, ಅವರು ಬೇಕಂತಲೇ ಕೆಲವು ಹೆಣ್ಣುಮಕ್ಕಳಿಗೆ ಎಲ್ಲಿಯೋ ಒಂದು ಕಡೆ ತೊಂದರೆ ಕೊಡುವುದಕ್ಕೆ

ಮತ್ತು ಮಾನಸಿಕಯಾತನೆ ಕೊಡುವುದಕ್ಕೆ ಈ ಬಿಲ್‌ನಿಂದ ನಾವು ಭಾರಿ ಉಪಕಾರವನ್ನು ಮಾಡಿಕೊಟ್ಟಂತಾಗುತ್ತದೆ! ಇದರ ಸಾಧ್ಯಸಾಧ್ಯತೆಗಳನ್ನು ಹಾಗೂ ಸಾಧಕ-ಭಾದಕಗಳನ್ನು ಮಾನ್ಯ ಸಚಿವರು ಚಿಂತನೆ ಮಾಡಬೇಕಾಗುತ್ತದೆ. ಇವೊತ್ತು ಬೆಂಗಳೂರಿನಲ್ಲಿ ನೂರಾರು ಗಾರ್ಮೆಂಟ್‌ಗಳಿವೆ, ಹತ್ತಾರು ಕಾರ್ಖಾನೆಗಳಿವೆ. ಇವೊತ್ತು ರಾತ್ರಿ ಪಾಳಿಯಲ್ಲಿ ಕೆಲಸ ಮಾಡತಕ್ಕಂಥವರ ಸಂಖ್ಯೆ ಎಲ್ಲಿಗೆ ಹೋದರೂ ಕಾರ್ಖಾನೆಗಳನ್ನು ಹೊರತುಪಡಿಸಿದರೆ ಇಂತಹ ಸಾಫ್ಟ್‌ವೇರ್ ಉದ್ದಿಮೆ ಮತ್ತೊಂದು ಕಾರ್ಖಾನೆಗಳೇನಿವೆ, ತಾಂತ್ರಿಕವಾಗಿರುವ ಸಂಸ್ಥೆಗಳಲ್ಲಿ ರಾತ್ರಿ ವೇಳೆಯಲ್ಲಿ ಕೇವಲ 5 ರಿಂದ 10 ಪರ್ಸೆಂಟ್ ಮಾತ್ರ ಕೆಲಸ ಮಾಡತಕ್ಕಂಥ ವ್ಯವಸ್ಥೆ ಇರುವುದರಿಂದ ಅಲ್ಲಿ ಹೆಣ್ಣು ಮಕ್ಕಳಿಗೆ ಕಾನೂನನ್ನು ಮಾಡಿಕೊಡುವ ಮೂಲಕ ಯಾವುದೇ ಒಂದು ವ್ಯವಸ್ಥೆ ಇಲ್ಲದೆ ಉದ್ಯೋಗ ಅರಸಿ ಬರುವವರಿಗೆ ಈ ವಿಧೇಯಕದಿಂದ ಎಲ್ಲಿಯೋ ಒಂದು ಕಡೆ ತೊಂದರೆಯಾಗುತ್ತದೆ. ಆದುದರಿಂದ, ಇದರ ಮೆರಿಟ್ಸ್ ಮತ್ತು ಡಿ-ಮೆರಿಟ್ಸ್ ಅನ್ನು ಚಿಂತನೆ ಮಾಡುವ ವ್ಯವಸ್ಥೆ ಇಟ್ಟುಕೊಂಡು ಕಾನೂನನ್ನು ಪೂರ್ತಿಯಾಗಿ ತೆಗೆದು ಯಾರೋ ಒಬ್ಬರ ಕೈಗೆ ಕೊಟ್ಟು ಮತ್ತೆ ಅವರಿಂದ ಆಗತಕ್ಕಂಥ ಅನಾಹುತ, ಖರ್ಗೆ ಸಾಹೇಬರನ್ನು ನಾವು ಇಲ್ಲಿ ದಂಡನೆ ಮಾಡುವುದಾಗಲಿ ಅಥವಾ ಇಲ್ಲಿ ನಿಂಧಿಸುವಂತಹ ಕೆಲಸ ಆಗಬಾರದು. ತಮ್ಮಲ್ಲಿ ಮತ್ತೊಂದು ವಿನಂತಿಸಿಕೊಳ್ಳುವುದೇನೆಂದರೆ, 20-30 ಮಹಿಳೆಯರಿದ್ದಾಗ ಕೆಲಸ ಮಾಡತಕ್ಕಂಥಾದ್ದು ಸ್ವಾಭಾವಿಕ. ಒಬ್ಬರೋ ಇಬ್ಬರೋ ಹೆಣ್ಣುಮಕ್ಕಳನ್ನು ರಾತ್ರಿ ವೇಳೆಯಲ್ಲಿ ಬಾ ಎಂದು ಹೇಳಿ ಅಧಿಕಾರಿ ಕೆಲಸ ತೆಗೆದುಕೊಳ್ಳುವುದಕ್ಕೋ ಇಲ್ಲವೇ ತನ್ನ ಸ್ವಂತಕ್ಕೆ ಎಲ್ಲಿಯೋ ಒಂದು ಕಡೆ ಬಳಸಿಕೊಳ್ಳುವುದಕ್ಕೋ, ಇದಕ್ಕೆ ಉದ್ದೇಶಗಳೇನಿದೆ, ಈ ಉದ್ದೇಶಗಳಲ್ಲಿ ತುಂಬಾ ತೊಂದರೆಯಾಗುವಂಥಾದ್ದೇ ಜಾಸ್ತಿ ಇರುವುದರಿಂದ, ದುರುದ್ದೇಶಗಳೇ ಜಾಸ್ತಿ ಇರುವುದರಿಂದ ಇದರ ಅವಶ್ಯಕತೆಯಿಲ್ಲ. ಬೆಂಗಳೂರು ನಗರದಲ್ಲಿ ಇವೊತ್ತು ಹೆಚ್ ಎಎಲ್, ಬಿಇಎಲ್ ಮುಂತಾದ ದೊಡ್ಡದೊಡ್ಡ ಕಾರ್ಖಾನೆಗಳಿವೆ. ಸಾಫ್ಟ್‌ವೇರ್‌ನಲ್ಲಿ ನನಗೆ ತಿಳಿದಮಟ್ಟಿಗೆ ರಾತ್ರಿ ವೇಳೆಯಲ್ಲಿ ಕೆಲಸ ಮಾಡತಕ್ಕಂಥವರ ಸಂಖ್ಯೆ ಭಾರಿ ವಿರಳ. ಈ ಭಾರಿ ವಿರಳ ಇರತಕ್ಕಂತಹವರಿಗೆ ಬರತಕ್ಕಂಥ ಕಾಲ್‌ಗಳನ್ನು ರಿಸೀವ್ ಮಾಡಿಕೊಳ್ಳುವುದಕ್ಕೆ ಅಲ್ಲಿಯ ಕಾಲಮಾನದ ವ್ಯವಸ್ಥೆಗಳನ್ನು ಅರಿತುಕೊಳ್ಳುವುದಕ್ಕೆ ಕೆಲವರ ಸಂಖ್ಯೆ ಬೇಕಾಗುತ್ತದೆ. ಆದ್ದರಿಂದ, ಹೆಣ್ಣುಮಕ್ಕಳನ್ನು ಎಲ್ಲೋ ಒಂದು ಕಡೆ ನಾವು ಈ ಕೆಲಸಕ್ಕೋಸ್ಕರ ನೇಮಕ ಮಾಡತಕ್ಕಂಥ ವಿಧೇಯಕ ಏನಿದೆ, ನಿಜವಾಗಿಯೂ ಖಮರುಲ್ ಇಸ್ಲಾಂ ಸಾಹೇಬರು ತಾವು ದಯಮಾಡಿ ಕಾರ್ಮಿಕ ಸಚಿವರಾಗಿದ್ದೀರಿ, ತಾವು ಹಿಂದುಳಿದ ಅಲ್ಪಸಂಖ್ಯಾತ ಸಮಾಜದಿಂದ ಬಂದವರಾಗಿರುವುದರಿಂದ ಇದರಿಂದಾಗುವ ದುಷ್ಪರಿಣಾಮವನ್ನು ತಾವು ಮನಗಾಣಬೇಕಾಗುತ್ತದೆ. ಇದನ್ನು ತಾವು ಮನಗಾಣಲಿಲ್ಲವೆಂದರೆ ಇವೊತ್ತು ಈ ವಿಧೇಯಕವನ್ನು ಅಂಗೀಕರಿಸಿ ಕೊಟ್ಟರೆ, ಸಂಸ್ಥೆಯ ಕೆಲಸದ ಮ್ಯಾನೇಜ್‌ಮೆಂಟ್‌ನಲ್ಲಿರುವ ಅಧಿಕಾರಿಯೂ, ಯಜಮಾನನೂ ಸಂಸ್ಥೆಯಲ್ಲಿ ಕೆಲಸ ಮಾಡುವ ಹೆಣ್ಣುಮಗಳಿಗೆ ಎಲ್ಲೋ ಒಂದು ಕಡೆ ಬಲಾತ್ಕಾರವಾಗಿ ನೀನು ಕೆಲಸಕ್ಕೆ ಬರಬೇಕೆಂದು ಹೇಳುತ್ತಾರೆ. ಆಕೆ ಕೆಲಸಕ್ಕೆ ಬರುವುದಿಲ್ಲವೆಂದು ಹೇಳಿದರೆ ಕಾನೂನು ಇದೆಯೆನ್ನುತ್ತಾರೆ. ಇಂತಹ ಕಾನೂನುಗಳನ್ನು ತರುವಾಗ ಮೊದಲು ನಾವು ಚಿಂತನೆ ಮಾಡಬೇಕಾಗುತ್ತದೆ. ಎಲ್ಲೋ ಒಂದು ಕಡೆ ಹೊಟ್ಟೆಪಾಡಿಗೋಸ್ಕರ ಕೆಲಸಕ್ಕೆ ಹೋಗುತ್ತೇವೆಂದಾಗ ಎಲ್ಲರೂ ಕೂಡ ದೊಡ್ಡವರು, ಎಲ್ಲರೂ ಒಳ್ಳೆಯವರು ಎಂದು ಹೇಳುವಂಥ ಪರಿಸ್ಥಿತಿ ಬೆಂಗಳೂರಿನಲ್ಲಿ ಇಲ್ಲ, ಇಡೀ ರಾಜ್ಯದಲ್ಲೂ ಇಲ್ಲ. ನಾನೂ ತಮ್ಮ ಮೂಲಕ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದಿಷ್ಟೆ. ದಯಮಾಡಿ ಇದರ

ಮೆರಿಟ್ಸ್ ಮತ್ತು ಡಿ-ಮೆರಿಟ್ಸ್ ಬಗ್ಗೆ ಮತ್ತೊಮ್ಮೆ ಚೆನ್ನಾಗಿ ಯೋಚನೆ ಮಾಡಿ ಹೆಣ್ಣುಮಕ್ಕಳು ರಾತ್ರಿ ವೇಳೆಯಲ್ಲಿ ಕೆಲಸ ಮಾಡುವಂಥದ್ದು ಆಗಲೇಬೇಕೆನ್ನುವ ಈ ವಿಶೇಷಕ ಏನಿದೆ, ಇದರಿಂದ ದುಷ್ಪರಿಣಾಮ ಬೀರುತ್ತದೆ. ಆದಕಾರಣ, ಮತ್ತೊಮ್ಮೆ ಈ ಚಿಂತನೆಯನ್ನು ಮರುಪರಿಶೀಲನೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿಸುತ್ತೇನೆ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ್ (ಬೀರೂರು) : ಸನ್ಮಾನ್ಯ ಉಪಾಧ್ಯಕ್ಷರೆ, ನಮ್ಮಸ್ನೇಹಿತರಾದ ಸೋಮಣ್ಣನವರು ಹೇಳಿರುವುದಕ್ಕೆ ಒಂದು ಸೇರಿಸಿ ಹೇಳುತ್ತೇನೆ. ಈ ಮಸೂದೆಯ ಪ್ರಕರಣ 25ಕ್ಕೆ ತಿದ್ದುಪಡಿ ತಂದಿದ್ದೀರಿ. ಅದರಲ್ಲಿ "ಪರಂತು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ರಾತ್ರಿ ವೇಳೆಯಲ್ಲಿ ಮಹಿಳೆಯರನ್ನು ನಿಯೋಜಿಸುವುದಕ್ಕೆ ಎಂದು ಇದೆ". ಒಂದು ಅಮೆಂಟ್‌ಮೆಂಟ್ ನಾನು ಕೇಳುತ್ತಿದ್ದೇನೆ. ಮಹಿಳಾ ತಂಡವನ್ನು ನಿಯೋಜಿಸುವುದಕ್ಕೆ ಎಂದು ಮಾಡಬೇಕೆಂದು ನನ್ನ ಮನವಿ. ಎಷ್ಟು ಜನ ಮಹಿಳೆಯರು? ಮಹಿಳೆಯರು ಎಂದರೆ ಒಬ್ಬರನ್ನು ಮಾಡಿಕೊಳ್ಳಬಹುದು, ಇಬ್ಬರನ್ನು ನಿಯೋಜಿಸಿಕೊಳ್ಳಬಹುದು. ಮಹಿಳಾ ತಂಡ ಕನಿಷ್ಠ ಹತ್ತು, ಹದಿನೈದು ಇಲ್ಲವೇ ಇಪ್ಪತ್ತು ಜನರನ್ನೊಳಗೊಂಡ ಮಹಿಳಾ ತಂಡವೆಂದು ಮಾಡಿ, ಆ ತಂಡಕ್ಕೆ ಸಂಬಂಧಿಸಿದಂತೆ ರೂಲ್ಸ್‌ನಲ್ಲಿ ಅವರು ಹೇಳಲಿ. 'ಮಹಿಳಾ ತಂಡವನ್ನು ನಿಯೋಜಿಸಿಕೊಳ್ಳುವುದಕ್ಕೆ' ಎನ್ನುವ ಒಂದು ಅಮೆಂಡ್‌ಮೆಂಟನ್ನು ಅವರು ಮೂವ್ ಮಾಡಬೇಕೆಂದು ಅವರನ್ನು ಕೇಳಿಕೊಳ್ಳುತ್ತೇನೆ. ಇದು ಒಂದು. ಮತ್ತೊಂದು ಭದ್ರತಾ ವ್ಯವಸ್ಥೆ ಎಂದು ಹೇಳಿದ್ದೀರಿ. ಭದ್ರತಾ ವ್ಯವಸ್ಥೆ ಏನೆಂದು ಹೇಳಬೇಕು. ಮುಂದೆ ಅವರು ಇದರಲ್ಲಿ ರೂಲ್ಸ್ ಮಾಡುತ್ತಾರಲ್ಲಾ, ಈಗಲೇ ಹೇಳಬೇಕು. ಸಾರಿಗೆ ವ್ಯವಸ್ಥೆ ಇದ್ದರೆ ಕಾರ್‌ಪ್ರೊವೈಡ್ ಮಾಡುವುದನ್ನು ಹೇಳಬಹುದು. ಮಹಿಳೆಯರಿಗೆ ಏನು ಭದ್ರತಾ ವ್ಯವಸ್ಥೆ ಕಲ್ಪಿಸುತ್ತಾರೆ ಎಂಬುದನ್ನು ಹೇಳಬೇಕು. ಎರಡನೆಯದು. ಅವರು ರಾತ್ರಿ ಪಾಳಿ ಮುಗಿದ ತಕ್ಷಣ ರಾತ್ರಿ ಮೂರು ಗಂಟೆಗೆ ಮನೆಗೆ ಹೋಗಿ ಎಂದು ಹೇಳುವುದು ಸರಿಯೆನಿಸುವುದಿಲ್ಲ. ಆದರೆ, ಬೆಳಗಿನವರೆಗೆ ಅವರಿಗೆ ಆ ಕಂಪನಿಯಲ್ಲಿ ಏನು ವ್ಯವಸ್ಥೆ ಮಾಡಿಕೊಡುತ್ತಾರೆ? ಆ ಕಂಡಿಷನ್ ಸಹ ಇದರಲ್ಲಿ ಸೇರಬೇಕಾಗುತ್ತದೆ. ಇವೆಲ್ಲವೂ ರೂಲ್ಸ್‌ನಲ್ಲಿ ಬಂದರೂ ಸಹ ಮಹಿಳಾ ತಂಡ ಎನ್ನುವ ತಿದ್ದುಪಡಿಯನ್ನು ಇದಕ್ಕೆ ತರಬೆಕೆಂದು ಮನವಿ ಮಾಡುತ್ತೇನೆ.

ಶ್ರೀ ಡಿ.ಬಿ. ಇನಾಂದರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಅಮೆಂಡ್‌ಮೆಂಟ್ ತಂದಿರುವುದು I.T enabled servicesಗೆ. I.T. enabled services ಎಂದರೆ, ಕಾಲ್ ಸೆಂಟರ್‌ಗಳು, ಇಲ್ಲೇನು ನಾವು ನಡೆಸುತ್ತಿದ್ದೇವಲ್ಲಾ, ಅದು ವಿದೇಶದ ಟೈಮ್‌ಗೆ ಇಲ್ಲಿ ನಡೆಸುತ್ತಾ ಇರತಕ್ಕಂಥ ಪರಿಸ್ಥಿತಿ ಬಂದಿದೆ. ಇವತ್ತು ತಾವೂ ನೋಡಿರಬಹುದು, 247 ಒಂದು ಇಂಟರ್‌ನ್ಯಾಷನಲ್ ಇದರ ಪ್ರಕಾರ ಕಾಲ್ ಸೆಂಟರ್ ಇದೆ. ಬೇರೆ ಬೇರೆ ಕಾಲ್ ಸೆಂಟರ್‌ಗಳು ಇಲ್ಲಿ ತೆಗೆಯತಕ್ಕಂಥ ಒಂದು ಪ್ರಸಂಗ ಬಂದಾಗ, ಆ ಒಂದು ವ್ಯವಸ್ಥೆಯಲ್ಲಿ ರಾತ್ರಿ ಕೂಡಾ ಕೆಲಸ ಮಾಡಬೇಕಾದಂತಹ ಒಂದು ಪರಿಸ್ಥಿತಿ ಇರುವುದರಿಂದ ಈ ಒಂದು ತಿದ್ದುಪಡಿಯನ್ನು ನಾವು ತಂದಿದ್ದೇವೆ. ಏಕೆಂದರೆ, ಇದು ಎಂಪ್ಲಾಯ್‌ಮೆಂಟ್ ಜನರೇಷನ್‌ಗೆ ಅನುಕೂಲವಾಗುತ್ತದೆ. ಕೆಲವು ಸೆಂಟರ್‌ನಿಂದ ಎಂಪ್ಲಾಯ್‌ಮೆಂಟ್ ಸಿಕ್ಕಷ್ಟು ಬೇರೆಡೆ ಸಿಗುವುದಿಲ್ಲ. ಇದಕ್ಕೆ ಇಂಜಿನಿಯರ್‌ಗಳೇ ಆಗಬೇಕಾಗಿಲ್ಲ, ಸಾಮಾನ್ಯ ಕಮ್ಯೂನಿಕೇಷನ್ಸ್ ಸ್ಕಿಲ್ಸ್ ಇರತಕ್ಕಂಥವರಿಗೂ ಕೂಡ ಎಂಪ್ಲಾಯ್‌ಮೆಂಟ್ ಸಿಗತಕ್ಕಂಥ ಒಂದು ವ್ಯವಸ್ಥೆ ಇರುವುದರಿಂದ, ಆ ಸೆಂಟರ್‌ಗಳಲ್ಲಿ ಇವತ್ತಿನ ಕಾಯ್ದೆ ಪ್ರಕಾರ ಹೆಣ್ಣು ಮಕ್ಕಳಿಗೆ

ಅವಕಾಶ ಇಲ್ಲ ಎನ್ನುವಂತಹ ದೃಷ್ಟಿಯಿಂದ, ಅಲ್ಲಿ ಪುರ್ತಿಯಾದಂತಹ ಒಂದು ಭದ್ರತೆ ಕೊಟ್ಟು ಈ ಒಂದು ವ್ಯವಸ್ಥೆಯನ್ನು ನಾವು ತರಲಿಕ್ಕೆ ಪ್ರಯತ್ನವನ್ನು ಮಾಡಿದ್ದೇನೆ. Encouragement of I.T enabled services for a growth not only in Bangalore but also in Mysore, Mangalore, Hubli, Dharwad, Belgaum, Gulbarga. ಎಲ್ಲಾ ಕಡೆನೂ ಇದನ್ನು ವಿಸ್ತರಣೆ ಮಾಡತಕ್ಕಂಥ ಒಂದು ಪರಿಸ್ಥಿತಿ ಇರುವುದರಿಂದ, ಅಲ್ಲಿ ಎಲ್ಲರಿಗೂ ನೌಕರಿ ಸಿಗತಕ್ಕಂಥ ಒಂದು ವ್ಯವಸ್ಥೆ ಇರುವುದರಿಂದ ಇದನ್ನು ಎಲ್ಲರೂ ಒಪ್ಪಬೇಕೆಂದು ನಾನು ಕೇಳುತ್ತೇನೆ.

SRI K. JAYAPRAKASH HEDGE:- Minimum number fix ಮಾಡಬೇಕು.

ಶ್ರೀ ಡಿ.ಬಿ ಇನಾಂದರ್:- ಈಗ ಅಮೆರಿಕಾಕ್ಕೂ ಸಮಗೂ 12 ತಾಸುಗಳ ವ್ಯತ್ಯಾಸ ಇರುವುದರಿಂದ .....

ಶ್ರೀ ಕೆ.ಜಯಪ್ರಕಾಶ್ ಹೆಗ್ಗಡೆ : ಹಾಗಲ್ಲ, ಅದನ್ನೆಲ್ಲಾ ಒಪ್ಪುತ್ತೇವೆ. ನೈಟ್ ಶಿಫ್ಟ್‌ನಲ್ಲಿ ಎಷ್ಟು ಮಹಿಳೆಯರು ಇರಬೇಕು ಎಂದು, minimum number should be fixed.

ಶ್ರೀ ಎ.ಕೃಷ್ಣಪ್ಪ (ಸಮಾಜಕಲ್ಯಾಣ ಸಚಿವರು) :- ಮಾನ್ಯ ಉಪ ಸಭಾಧ್ಯಕ್ಷರೇ "ತಂಡ ಮಾಡಿ" ಎನ್ನುವುದು ಒಂದು ಸಲಹೆ. ಆದರೆ ಪ್ರಾಪ್ತಿಕಲ್ಲಾಗಿ ನಾನು ನಿಮಗೆ ಹೇಳಲಿಕ್ಕೆ ಬಯಸುತ್ತೇನೆ, When they get into the departments, ಅಲ್ಲೆಲ್ಲಾ ಗುಂಪುಗಳು ಇರುವುದರಿಂದ, 10 ಜನದ್ದು ಒಂದು ತಂಡ ಎಂದು ಮಾಡಿದೆವು ಎಂದಿಟ್ಟುಕೊಳ್ಳಿ, different sectionನಲ್ಲಿ ಪೋಸ್ಟ್ ಮಾಡುತ್ತಾರೆ. ಅವರು ವೈರಿಂಗ್‌ನಲ್ಲಿ ಒಬ್ಬರು ಇರುತ್ತಾರೆ, ಸಾಲ್ಡರಿಂಗ್‌ನಲ್ಲಿ ಒಬ್ಬರು ಇರುತ್ತಾರೆ ಅಥವಾ ಬೇರೆ ಬೇರೆ ಸೆಕ್ಷನ್ಸ್‌ನಲ್ಲಿ ಹೋಗಿ ಅವರು ಕೆಲಸ ಮಾಡುತ್ತಿರುತ್ತಾರೆ. ಒಂದೇ ಜಾಗದಲ್ಲಿ ಕುಳಿತು ಕೆಲಸ ಮಾಡಲಿಕ್ಕಾಗುವುದಿಲ್ಲ. That may be a right thing. ಏನೋ ಒಂದು ಕನ್ವೇಯರ್ ಬೆಲ್ಟ್‌ನಲ್ಲಿ ಕೆಲಸ ಮಾಡುವ ಜಾಗ, ಒಂದು mass assemblies ಮಾಡುವ ಜಾಗದಲ್ಲಿ ಅದು ಆಲ್‌ರೈಟ್. ಆದರೆ ಐ.ಟಿ.ನಲ್ಲೇ ಪ್ರಾಕ್ಟಿಕಲ್ಲಾಗಿ ಇದು ಸಾಧ್ಯವಿಲ್ಲ ಎಂದು ನಾನು ಹೇಳುತ್ತಿದ್ದೇನೆ, they are not placed in one hall, one room and one place. They are again scattered. So, that will not help.

ಶ್ರೀ ಕೆ.ಬಿ.ಮಲ್ಲಿಕಾರ್ಜುನ್:- ಒಂದೇ ರೂಫ್‌ನಲ್ಲಿ ಒಂದು ತಂಡ ಎಂದು ಮಾಡಿ. ಮಾನ್ಯ ಸಮಾಜ ಕಲ್ಯಾಣ ಸಚಿವರು ನೀವು ಇದಕ್ಕೆ ಎಂಟರ್ ಆಗಬೇಕಾಗುತ್ತದೆ. ಮಹಿಳಾ ತಂಡ ಎಂದು ಮಾಡಿ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ:- ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಭಾಷಣದಲ್ಲಿ ಮಾತನಾಡುತ್ತಾ "ಇಡೀ ರಾತ್ರಿ ಪರಸ್ಪರ ವ್ಯವಹರಿಸಬೇಕಾಗುತ್ತದೆ" ಎಂಬುದನ್ನು ತೆಗೆಯಲು ಹೇಳಿದರು. "ದುರವಾಣಿಯ ಮುಖಾಂತರ ವ್ಯವಹರಿಸಬೇಕು" ಅಂತಾದ್ದನ್ನು ಸೇರಿಸಿ ಸಾಕು.

ಶ್ರೀ ಎಸ್. ಸುರೇಶ್‌ಕುಮಾರ್:- ಏನು ಮಾನ್ಯ ಕೆ.ಬಿ.ಮಲ್ಲಿಕಾರ್ಜುನ್ ಅವರು ಹೇಳಿದರು "ತಂಡ" ಎಂದು ಅದು ನಿಮ್ಮ ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆಯಲ್ಲಿ ಇದೆ. ಆದರೆ ಸೆಕ್ಷನ್ಸ್‌ನಲ್ಲಿ ಇಲ್ಲ ಅಷ್ಟೆ. ವಿಧೇಯಕದ ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆನಲ್ಲೇ,

"ಈ ಕಾರ್ಯ ಸಂಸ್ಥೆಗಳು ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಕೆಲಸಗಾರರನ್ನು ನಿಯೋಚಿಸಿಕೊಂಡಿರುತ್ತದೆ. 25ನೇ ಪ್ರಕರಣವು, ರಾತ್ರಿಯ ವೇಳೆ ಮಹಿಳೆಯರನ್ನು ನಿಯೋಜಿಸುವುದನ್ನು ನಿಷೇಧಿಸಿರುವುದರಿಂದ, ಇದು ಕಾರ್ಯ ಸಂಸ್ಥೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ. ಸಾಪ್ಟವೇರ್ ಅಭಿವೃದ್ಧಿಯನ್ನು ಸಾಮಾನ್ಯವಾಗಿ ಮಹಿಳಾ ನೌಕರರೂ ಇರಬಹುದಾದ ಒಂದು ತಂಡಕ್ಕೆ ವಹಿಸಲಾಗುತ್ತದೆ"

ಎಂದು ಇದೆ. ಅದನ್ನು ನೀವು ಅಲ್ಲಿಗೆ ಸೇರಿಸಿ ಬಿಟ್ಟು ಎಂದು ತಂಡ ಎಂದು ಮಾಡಿ. It will be better. ಇದೊಂದು ಸಣ್ಣ ಅಮೆಂಡ್‌ಮೆಂಟ್ ಅಷ್ಟೆ.

+ಶ್ರೀ ಬಿ.ಕೆ.ಚಂದ್ರಶೇಖರ್(ಶಿಕ್ಷಣ ಸಚಿವರು):- ಮಾನ್ಯ ಉಪಾಧ್ಯಕ್ಷರೇ, ಇದರ ಉದ್ದೇಶ ಇಲ್ಲಿ ಕುಳಿತಿರುವ ಎಲ್ಲಾ ಸ್ನೇಹಿತರಿಗೂ ಬಹಳ ಚೆನ್ನಾಗಿ ಗೊತ್ತಿದೆ. ಈಗ ತಾನೇ ಮಾನ್ಯ ಸುರೇಶ್ ಕುಮಾರ್‌ರವರು ಕೂಡ ಸಂಕ್ಷಿಪ್ತವಾಗಿ ಅದನ್ನು ಹೇಳಿದರು. ಹಿಂದೆ ನಾನು ಮಾಹಿತಿ ತಂತ್ರಜ್ಞಾನ ಇಲಾಖೆಯಲ್ಲಿ ಇದ್ದಾಗ ಇದರ ಬಗ್ಗೆ ಬಹಳ ಚರ್ಚೆ ಮಾಡಿದ್ದೇ. ವಿಶೇಷವಾಗಿ ಇದು ಇಷ್ಟೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕೆಲಸ ಮಾಡುವ ಮಹಿಳೆಯರಿಗಾಗಿ ಮಾತ್ರ ಎಂದು ಸ್ಪೇಸಿಫಿಕ್ಕಾಗಿ ಉದ್ದೇಶಗಳಲ್ಲಿದೆ. ಅಲ್ಲಿ ಕೆಲಸ ಮಾಡುವ ಎಲ್ಲರೂ ಕೂಡ highly educated ಇದ್ದಾರೆ. ಪ್ರಪಂಚದ ಎಲ್ಲಾ ಭಾಗದಲ್ಲೂ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಶಿಫ್ಟ್ ಸಿಸ್ಟಮ್‌ನಲ್ಲಿ ಕೆಲಸ ಮಾಡುತ್ತಾರೆ. ಬಹುತೇಕ ಮೂರು ಶಿಫ್ಟ್‌ನಲ್ಲಿ ಕೆಲಸ ಮಾಡುತ್ತಾರೆ. ಮಹಿಳೆಯರಿಗೆ ಇಲ್ಲೂ ಅದೇ ತರಹ ಕೆಲಸ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕು ಎಂಬ ಕೋರಿಕೆ ಬಂದಾಗ ಇಲ್ಲೊಂದು ಸರ್ವೆ ಮಾಡಿಸಲಾಯಿತು. ಅವರೂ ಮಾಡಿದರು ಮತ್ತು ನಾವೂ ಕೂಡ ಮಾಡಿಸಿದೆವು. ಬೆಂಗಳೂರಿನಲ್ಲಿರುವ ಮಹಿಳೆಯರು ಮೂರು ಶಿಫ್ಟ್‌ನಲ್ಲಿ, ವಿಶೇಷವಾಗಿ ನೈಟ್ ಶಿಫ್ಟ್ ನಲ್ಲಿ ಕೆಲಸ ಮಾಡಲಿಕ್ಕೆ ತಯಾರಿದ್ದಾರಾ ಎಂದು ಸಮೀಕ್ಷೆ ನಡೆಸಿದಾಗ, ಅದರಲ್ಲಿ 98.5% ಮಹಿಳೆಯರು ನಾವೂ ಕೆಲಸ ಮಾಡುತ್ತೇವೆ, ನೀವು ಅನುಕೂಲ ಮಾಡಿ ಕೊಡಬೇಕು ಎಂದು ಹೇಳಿದ್ದರು. ಆಮೇಲೆ ಪ್ರಶ್ನೆ ನಾವು ಏನು ಕೇಳಿದೆವು ಎಂದರೆ, ಅವರಿಗೆ ಯಾವ ರಕ್ಷಣೆ ಇರುತ್ತದೆ? ರಾತ್ರಿ ಅವರು ಮನೆಯಿಂದ ಅಲ್ಲಿಗೆ ತಲುಪುವುದು ಹೇಗೆ? ಬೆಳಗಿನ ಜಾವ ಕೆಲಸ ಮಾಡಿದಾಗ ಬರುವುದು ಅಂತ ಕಷ್ಟ ಅಲ್ಲ, ಆದರೆ ರಾತ್ರಿ ಹೊತ್ತು 9-10 ಗಂಟೆಗೆ ಹೋದರೆ ಹೇಗೆ ಹೋಗುತ್ತಾರೆ? ಅಲ್ಲಿ ಫ್ಯಾಕ್ಟರಿಯಲ್ಲಿ ಅಥವಾ ಕಂಪನಿಯಲ್ಲಿ ಕೆಲಸ ಮಾಡುವಾಗ ಏನು? ಇಲ್ಲಿರುವ ನಾವೆಲ್ಲರೂ ಸಾಫ್ಟ್‌ವೇರ್ ಕಂಪನಿಗಳ ಒಳಗಡೆ ಹೋಗಿ ಅವರು ಕೆಲಸ ಮಾಡುವುದನ್ನು ನೋದಿದ್ದೇವೆ. ಅವರ working conditions ನೋಡಿದ್ದೇವೆ, ಅದು ಫ್ಯಾಕ್ಟರಿ ಅಲ್ಲ, ಅದು ಕಂಪನಿಗಳೇ. ಇದೊಂದು ತರಹ ಈ ಕಾಲದ ಫ್ಯಾಕ್ಟರಿಗಳು. ಅಲ್ಲಿ excellent working conditions ಇದೆ. ಅಲ್ಲಿ ಸಂಪೂರ್ಣ ಸೇಫ್ಟಿ ಇದೆ. ಅಲ್ಲಿರುವ Canteen whole night work ಮಾಡುತ್ತದೆ. ಇಡೀ ಕಂಪನಿಯಲ್ಲಿ, ಇಡೀ ಆಫೀಸ್‌ನಲ್ಲಿ ಫುಲ್ ಜನ ಇರುತ್ತಾರೆ. ಅವರು ಬೇರೆ ಬೇರೆ ಕೂಬಿಕಲ್‌ನಲ್ಲಿ ಇದ್ದರೂ ಕೂಡ ಕಂಪ್ಯೂಟರ್ ಕೆಲಸ ಮಾಡುತ್ತಾರೆ. ನೈಟ್ ಶಿಫ್ಟ್ ನಲ್ಲೂ ಇಡೀ ಆಫೀಸ್ ನಲ್ಲಿ ಜನ ಇರುತ್ತಾರೆ., ಬರೀ ಒಬ್ಬರೋ ಇಬ್ಬರೋ ಮಹಿಳೆಯರು ಮಾಡುವಂತಾದ್ದು ಅಲ್ಲ. ಆದುದರಿಂದ ಇದಿಷ್ಟು ಹಿನ್ನೆಲೆಯಲ್ಲಿ ಇದನ್ನು ಮಾಡಿ ಕೊಡದೇ ಹೋದರೆ ಒಂದು ಶಿಫ್ಟ್‌ಗೆ ಅವರಿಗೆ ತೊಂದರೆಯಾಗಿ ಮಹಿಳೆಯರು ಇದರಿಂದ ಕೆಲಸ ಕೆಳೆದುಕೊಳ್ಳುವ ಅವಕಾಶ ಕೂಡ ಆಗುತ್ತದೆ. ಆ ಚಾನ್ಸ್ ಕೂಡ ಇರುತ್ತದೆ. ಅದನ್ನು ತಪ್ಪಿಸುವುದಕ್ಕೋಸ್ಕರ ಇಂತಹ ಪ್ರಾವಿಷನ್

ಕೇಳಿದ್ದು. ನನ್ನ ಅಭಿಪ್ರಾಯದಲ್ಲಿ ಇದು ಒಂದು ವರ್ಷದ ಮುಂಚೆಯೇ ಆಗಬೇಕಾಗಿತ್ತು. ಅಮೆರಿಕಾ ಮುಂತಾದ ಬೇರೆ ಬೇರೆ ದೇಶಗಳಲ್ಲಿ ಏನಿದೆ? ಬೇರೆ ಅಭಿವೃದ್ಧಿಶೀಲ ದೇಶಗಳಲ್ಲಿ ಏನಿದೆ ಎನ್ನುವುದರ ಬಗ್ಗೆ ಮಾಹಿತಿ ತರಿಸಿಕೊಂಡೆವು. ಬರೀ western countriesದ್ದು ಮಾತ್ರವಲ್ಲ, ಅಭಿವೃದ್ಧಿ ಶೀಲ ದೇಶಗಳಲ್ಲಿ ಏನಿದೆ, ಪಕ್ಕದ ದೇಸಗಳಲ್ಲಿ ಏನಿದೆ ಎಂಬ ಬಗ್ಗೆ ಎಲ್ಲಾ ಕಡೆಯಿಂದ ಮಾಹಿತಿ ತರಿಸಿಕೊಂಡೆವು. ಮಹಿಳೆಯರಿಗೆ ಎಲ್ಲಾ ಕಡೆ ನೈಟ್ ಶಿಫ್ಟ್ ಅಲೋ ಮಾಡುತ್ತಿದ್ದಾರೆ. ಸರ್ಕಾರದ ವತಿಯಿಂದ ನಾನೂ ಕೂಡ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರಲ್ಲಿ ಯಾವ ತೊಂದರೆಯೂ ಇಲ್ಲ, ನಾವು ರೂಲ್ಸ್ ಮಾಡಿದಾಗ ಏನಾದರೂ ಅಡಿಷನಲ್ ಸೇಫ್ಟಿ ಇದ್ದರೆ, ಮಾನ್ಯ ಸೋಮಣ್ಣನವರು ಮತ್ತು ಮಾನ್ಯ ಸುರೇಶ ಕುಮಾರ್ ರವರು ಹೇಳಿದ್ದನ್ನು ರೂಲ್ಸ್ ನಲ್ಲಿ ಸೇರಿಸಿಕೊಂಡು ಆ ರಕ್ಷಣೆ ಕೊಟ್ಟು ನಾವು ಖಂಡಿತಾ ಇದ್ದನ್ನು ಪಾಸ್ ಮಾಡಬೇಕು. ಮಹಿಳೆಯರು ಇದನ್ನು ಬಹಳ ದೊಡ್ಡ ರೀತಿಯಲ್ಲಿ ಸ್ವಾಗತ ಮಾಡುತ್ತಾರೆಂದು ಹೇಳಿ ಸರ್ಕಾರದ ಪರವಾಗಿ ನಾನೂ ಕೂಡ ವಿರೋಧ ಪಕ್ಷದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

SRI QUAMARUL ISLAM:- Sir, I will explain another thing. Recently in the Chennai Court, the women wing has gone against the same Act which is related to the industry. I just read out the judgement of the Hon'ble Chennai high Court. it says, there cannot be any discrimination on the basis of gender. It is against the very spirit of the Constitution. Existing act ಬಗ್ಗೆ this is the judgement. ನಾನು ತಮಗೆ ಹೇಳುತ್ತಿದ್ದೇನೆ. Now as very rightly pointed out, there are apprehensions. I fully agree with Somannaji and with all other members. I also know their feelings but Hon'ble Minister B.K. Chandrashekarji was the I.T. Minister and therefore he clarified certain points now Inamdarji is there, Sir, here in Karnataka we are competing with the whole world. There are about 1500 establishments and we have to give them permission, otherwise if you see the results there are women...

ಶ್ರೀ ಕೆ.ಜಯಪ್ರಕಾಶ್ ಹೆಗಡೆ: - ನಾವು ಆ ವಿಚಾರ ಹೇಳಲೇ ಇಲ್ಲ, ನಾವು night shiftನಲ್ಲಿ minimum number of women workers ತಂಡ ಮಾಡಿ ಎಂದು ಹೇಳಿದೆವು.

SRI QUAMARUL ISLAM:- Safety measurement ಬಗ್ಗೆ ಏನೊಂದು ಅಡಿಷನಲ್ ಸಲಹೆ ಕೊಟ್ಟಿದ್ದೀರಿ, ಆ ಸಲಹೆ ಪ್ರಕಾರ ರೂಲ್ಸ್‌ನಲ್ಲಿ ನಾನು ಫ್ರಾವಿಷನ್ ಮಾಡಿ ಕೊಡುತ್ತೇನೆ. ಮತ್ತೆ ಅದನ್ನು ಸೆಟ್ ರೈಟ್ ಮಾಡುವುದಕ್ಕೆ ನಮ್ಮ ಅಪೋಸಿಷನ್ ಲೀಡರ್‌ವನ್ನು ಹೇಳಿದ್ದಾರೆ ಅದನ್ನು ಸೆಟ್ ರೈಟ್ ಮಾಡುತ್ತೇನೆ.

ಶ್ರೀ. ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ: - ಮಾನ್ಯ ಮಂತ್ರಿಗಳು ಸ್ವಲ್ಪ ಯೀಲ್ಡ್ ಆದರೆ ನಾನು ಒಂದು ವಿಚಾರ ಹೇಳಬಯಸುತ್ತೇನೆ. ಈಗ ನೀವು ಒಂದು ಕಡೆ ಹೆಣ್ಣುಮಕ್ಕಳಿಗೆ 33% ಮೀಸಲಾತಿ ಎನ್ನುತ್ತೀರಿ, ಇನ್ನೊಂದು ಕಡೆ ಹೆಣ್ಣು ಅಬಲೆ ಎನ್ನುತ್ತೀರಿ. ಇವತ್ತು computer systemನಲ್ಲಿ through out the world ಇದು ಒಂದೇ ರೀತಿ ಯಲ್ಲಿ ಇದೆ. ಇದೊಂದು ಗಂಡಸು ಸಮಾಜ, ನಮ್ಮದೇ ಆದಂತಹ ಅಭಿಪ್ರಾಯವನ್ನು ನಾವು ಹೇರುತ್ತೇವೆ. ಇಲ್ಲಿ ಹೆಣ್ಣು

ಮಕ್ಕಳಿದ್ದಾರೆ, ಅವರಲ್ಲಿ ಯಾರಾದರೂ ಮಾತನಾಡುತ್ತಾರೋ ಏನೋ ಗೊತ್ತಿಲ್ಲ. ಮಹಿಳೆಯರಿಗೆ ಎಲ್ಲರೂ ಧೈರ್ಯ ತುಂಬುವಂತಹ ಕೆಲಸವನ್ನು ನಾವು ಮಾಡಬೇಕಾಗಿದೆ."ತಂಡ" ಮಾಡಿ ಎಂದು ಹೇಳುವುದರ ಮೂಲಕ ಅವರಲ್ಲಿ ಇನ್ನೂ ಅಧೈರ್ಯ ನಾವು ಕ್ರಿಯೇಟ್ ಮಾಡುವುದಕ್ಕೆ ಹೊಗುತ್ತಿದ್ದೇವೆ.ಈ ಅಧೈರ್ಯವನ್ನು ನಾವು ಕ್ರಿಯೇಟ್ ಮಾಡಬಾರದು. ಅವರಿಗೆ ಧೈರ್ಯ ತುಂಬುವಂತಹ ಕೆಲಸವನ್ನು ಈ ಗಂಡು ಸಮಾಜ ಮಾಡಬೇಕು. ಆ ಕೆಲಸವನ್ನು ನೀವು ಮಾಡುವುದು ಬಿಟ್ಟು ತಂಡ ಮಾಡಿ ಎಂದು ಹೇಳಿದರೆ ಹೇಗೆ? ಇದರಿಂದ ನಾವು ಏನು ಎನ್‌ಕರೇಜ್‌ಮೆಂಟ್ ಮಾಡಿದಂತಾಗುತ್ತದೆ? ಇದನ್ನು ಮಾಡಬೇಕು ಸ್ವಾಮಿ.

ಶ್ರೀ. ಕೆ.ಜಯಪ್ರಾಕಾಶ್ ಹೆಗಡೆ: - ಶ್ರೀನಿವಾಸಗೌಡರೇ, ಅದಕ್ಕೋಸ್ಕರ ಮೊನ್ನೆ ಒಂದು ದೊಡ್ಡ ಕಂಪನಿಯಲ್ಲಿ sex abuse case ಆಯಿತು. ಅದು ಎಲ್ಲಾ ಪತ್ರಿಕೆಗಳಲ್ಲೂ ಬಂತು, ಇದು ಅಮೆರಿಕಾ ದೇಶದಲ್ಲಿ ಆಗಿರುವುದು ...

ಶ್ರೀ. ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ:- ಒಂದೊಂದು ಕಡೆ ಆಗಿರಬಹುದು, ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ನಾವು ಅವರಿಗೆ ಎನ್‌ಕರೇಜ್ ಮಾಡದಿದ್ದರೆ ಅವರು ಯಾವತ್ತಿಗೂ ಕೂಡ ತುಳಿತಕ್ಕೆ ಸಿಕ್ಕಿಹಾಕಿಕೊಳ್ಳುತ್ತಾರೆ. ಅವರು ಆ ತುಳಿತಕ್ಕೆ ಸಿಕ್ಕಿಹಾಕಿಕೊಳ್ಳಬಾರದು.

ಶ್ರೀ. ಕೆ.ಬಿ.ಮಲ್ಲಿಕಾರ್ಜುನ್: - ನಾನು, ಮಾನ್ಯ ಜಯಪ್ರಕಾಶ್ ಹೆಗಡೆ ಮತ್ತು ಸೋಮಣ್ಣನವರು ಮಾನ್ಯ ಶ್ರೀನಿವಾಸ ಗೌಡರ ವಿಷಯವನನು ಪ್ರಸ್ತಾಪ ಮಾಡಲಿಲ್ಲ. ನಾವು ಬಹಳ ಗೌರವಯುತವಾಗಿ ಮಹಿಳೆಯರ ಬಗ್ಗೆ ಮಾತನಾಡಿದ್ದೇವೆ. ಬೇರೆ ಯಾವುದೇ ಕೆಟ್ಟ ಉದ್ದೇಶದಿಂದ ನಾವು ಈ ವಿಷಯವನ್ನು ಪ್ರಸ್ತಾಪ ಮಾಡಲಿಲ್ಲ . ಸೆಕ್ಯೂರಿಟಿ ಎಂದು ಏನಿತ್ತು, ಅದಕ್ಕೆ ಮಹಿಳೆಯರ ತಂಡ ಇರಬೇಕು ಎಂದು ಅನ್ನತಕ್ಕದ್ದು ಮಾತ್ರ ಹೇಳಿದ್ದು ಬಿಟ್ಟರೆ, ಅವರು ಯಾವ ಯೋಚನೆ ಮಾಡಿದರು ನನಗಂತೂ ಗೊತ್ತಿಲ್ಲ. ನಾವಂತೂ ಆ ಯೋಚನೆ ಮಾಡೇ ಇರಲಿಲ್ಲ. ನಾವು ಕೇಳತಕ್ಕದ್ದು ಮಹಿಳೆಯರ ತಂಡ, ಸಾರಿಗೆ ಮತ್ತು ರಕ್ಷಣೆ. ಈ ಮೂರರ ಬಗ್ಗೆ ರೂಲ್ಸ್‌ನಲ್ಲಿ ಮಾಡುತ್ತೇನೆ ಎಂದರೆ ನಾವು ಇದನ್ನು ಸ್ವಾಗತ ಮಾಡುತ್ತಿದ್ದೇವೆ ಅಷ್ಟೆ. ನಮಗೇನು ಆ ಕಲ್ಪನೆ ಇರಲಿಲ್ಲ, ಅದನ್ನು ನಿಮ್ಮ ತಲೆಗೆ ಯಾರೂ ತುಂಬಿದರೋ ಗೊತ್ತಿಲ್ಲ.

5.40ಪಿ.ಎಂ

(ಅ) ಶ್ರೀ ಡಿ.ಬಿ ಇನಾಂದಾರ್: ಅದರ ಬಗ್ಗೆ ರಕ್ಷಣೆ ಕೊಡಬೇಕಾದ್ದಲ್ಲಿ ನಾವೇನೂ ಹಿಂದೆ ಬೀಳುವುದಿಲ್ಲ.

ಶ್ರೀ ಖಮರುಲ್ ಇಸ್ಲಾಂ: ಸಭೆಯ ಮುಂದಿರುವ ತಿದ್ದುಪಡಿಯನ್ನು ಅಂಗೀಕರಿಸಬೇಕೆಂದು ಮಾನ್ಯ ಸದಸ್ಯರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಪರ್ಯಾಲೋಚನಾ ಪ್ರಸ್ತಾವ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ: "2002ರ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ-2

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ: ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ-2 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ-1 ಇತ್ಯಾದಿ:

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ. ಖಮರುಲ್ ಇಸ್ಲಾಂ: (ಕಾರ್ಮಿಕ ಸಚಿವರು) ಮಾನ್ಯ ಉಪಾಧ್ಯಕ್ಷರೆ, "2002ನೇ ಸಾಲಿನ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ: "2002ರ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

(ಆ) ಕಾರ್ಖಾನೆಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ 2002

ಪರ್ಯಾಲೋಚನಾ ಪ್ರಸ್ತಾವ

ಶ್ರೀ. ಖಮರುಲ್ ಇಸ್ಲಾಂ: (ಕಾರ್ಮಿಕ ಸಚಿವರು) ಮಾನ್ಯ ಉಪಾಧ್ಯಕ್ಷರೆ, "2002ನೇ ಸಾಲಿನ ಕಾರ್ಖಾನೆಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು

ಉಪಾಧ್ಯಕ್ಷರು: ಏನಾದರೂ ವಿವರಣೆ ಕೊಡುವುದು ಇದ್ದರೆ ಮಾನ್ಯ ಮಂತ್ರಿಗಳು ಕೊಡಬಹುದು.

ಶ್ರೀ. ಖಮರುಲ್ ಇಸ್ಲಾಂ: ಮಾನ್ಯ ಉಪಾಧ್ಯಕ್ಷರೆ, This is very small amendment. The Legislature Committee on Women & Child Welfare visited some of the factories. As per the present Factories (Karnataka Amendment) Act, in Section 45 and 49, where there are more than five hundred workers, the Factories shall have a Welfare Officer, Medical Officer and a Supervisor. The Legislature Committee had recommended to the Labour Department that the number should be reduced from 500 to 200, in the larger interests of the welfare of the labourers. Based on